ಹೋಗಿಬರುವ ಸಲುವಾಗಿ 3 ಸೇತುವೆಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ. ಈ ಕಾಮಗಾರಿಯ ಸರ್ವೆ, ನಕ್ಷೆ, ಅಂದಾಜು ಪಟ್ಟಿ ಹಾಗೂ ಟೆಂಡರ್ ದಾಖಲೆಗಳನ್ನು ತಯಾರಿಸಿ ಕೊಡಲು ಮೆ॥ ಸಿವಿಲ್ ಎಡ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ವಹಿಸಲಾಗಿದೆ. ಸರ್ವೆ ಕಾರ್ಯ ಮುಗಿದಿದ್ದು, 3 ಸೇತುವೆಗಳ ಪೈಕಿ 1 ಸೇತುವೆಯ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಾಗಿದೆ. ಉಳಿದ ನಕ್ಷೆ ಮತ್ತು ಅಂದಾಜು ಪಟ್ಟಿಗಳು ಬಂದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

(ಇ) ಈ ಯೋಜನೆಗೆ ತಗಲುವ ಒಟ್ಟು ಅಂದಾಜು ವೆಚ್ಚ ರೂ. 91 ಕೋಟಿಗಳಿಗೆ ಕ್ರಿಯಾ ಯೋಜನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

ಆಂಧ್ರಪ್ರದೇಶ ಸರ್ಕಾರವು ಅಂತಿಮವಾಗಿ ಪೂರ್ಣ ಹಣವನ್ನು ದಿನಾಂಕ 13–3–2007ರಂದು ಬಿಡುಗಡೆ ಮಾಡಿರುತ್ತದೆ. ಸೇತುವೆಗಳ ನಿರ್ಮಾಣ ಹೊರತುಪಡಿಸಿ ಉಳಿದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.

662. **ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):**– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಪುನರ್ವಸತಿಗೊಂಡ ಗ್ರಾಮಗಳಿಗೆ ಧನ್ನೂರಿನಿಂದ ಗುಂಪುಹಳ್ಳಿಗಳ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಿದ್ದು, ಕಾಮಗಾರಿ ವಿಳಂಬವಾಗಲು ಕಾರಣವೇನು;

(ಆ) ಈ ಗುಂಪುಹಳ್ಳಿಗಳ ಗ್ರಾಮಮಸ್ಥರಿಗೆ ಕುಡಿಯುವ ನೀರಿನ ತೊಂದರೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಪರ್ಯಾಯ ವ್ಯವಸ್ಥೆಯನ್ನು ಯಾವಾಗ ಮಾಡಲಾಗುವುದು; (ವಿವರ ನೀಡುವುದು)

(ಈ) ಧನ್ನೂರಿನಿಂದ ಪುನರ್ವಸತಿ ಕೇಂದ್ರಗಳಿಗೆ ಗುಂಪುಹಳ್ಳಿಗಳ ಕುಡಿಯುವ ನೀರಿನ ಯೋಜನೆಯ ಗುತ್ತಿಗೆಗೆ ನೀಡಿದಂತಹ ಗುತ್ತಿಗೆದಾರನ ವಿಳಂಬದಿಂದಾಗಿ ಗ್ರಾಮಸ್ಥರಿಗೆ ಕುಡಿಯುವ ನೀರಿಗಾಗಿ ತೀವ್ರ ತೊಂದರೆಯಾಗಿದ್ದು ಇದಕ್ಕೆ ಕಾರಣನಾದ ಗುತ್ತಿಗದಾರನ ಮೇಲೆ ಯಾವ ಕ್ರಮ ಜರುಗಿಸಲಾಗಿದೆ;

(ಉ) ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು, ಕೈಗೊಳ್ಳಲ್ಲಿರುವ ಕ್ರಮದ ಬಗ್ಗೆ ನಿರ್ದಿಷ್ಟ ಸಮಯ ಹಾಗೂ ವಿವರವಾದ ಮಾಹಿತಿಯನ್ನು ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):-

(ಅ) ಹುನಗುಂದ ತಾಲ್ಲೂಕಿನ 6 ಹಾಗೂ ಮುದೇಬಿಹಾಳ ತಾಲ್ಲೂಕಿನ 9 ಪುನರ್ವಸತಿ ಕೇಂದ್ರಗಳು ಮತ್ತು 3 ಗ್ರಾಮಗಳಿಗೆ ಧನ್ನೂರ–ಅಯ್ಯನಗುಡಿ ಸಂಯುಕ್ತ ನೀರು ಪೂರೈಕೆ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೇರಿದ ಧನ್ನೂರಿನ ಜಾಕ್‌ವೆಲ್‌ನ್ನು ಜಲಮೂಲವನ್ನಾಗಿ ಪರಿಗಣಿಸಲಾಗಿದೆ. ಈ ಜಾಕ್‌ವೆಲ್‌ಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲು ಮಂಡಳಿಯು ಜುಲೈ 2004ರಲ್ಲಿ ಅನುಮತಿ ನೀಡಿದೆ. ವಿದ್ಯುತ್ ಸಂಪರ್ಕಕ್ಕಾಗಿ ಜಿಲ್ಲೆ 2006ರಲ್ಲಿ ಅನುಮತಿ ದೊರಕಿದೆ. ಹೀಗಾಗಿ ಕಾಮಗಾರಿಯಲ್ಲಿ ವಿಳಂಬವಾಗಿದೆ.

(ಆ) ಬಂದಿದೆ

(ಇ) ಧನ್ನೂರ–ಅಯ್ಯನಗುಡಿ ಸಂಯುಕ್ತ ನೀರು ಪೂರೈಕೆ ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ ನೀರು ಪೂರೈಕೆ ಮಾಡಲಾಗುವುದು.

(ಈ) ಜಾಕ್‌ವೆಲ್‌ಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲು ಜುಲೈ 2004ರಲ್ಲಿ ಅನುಮತಿ ದೊರಕಿದ ನಂತರ ಹಾಗೂ ಜಾಕ್‌ವೆಲ್ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಜುಲೈ 2006ರಲ್ಲಿ ಮತ್ತು ಶುದ್ದೀಕರಣ ಘಟಕದ ಪಂಪ್‌ಸೆಟ್‌ಗಳಾಗಿ ಅಕ್ಟೋಬರ್ 2006ರಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅನುಮತಿ ದೊರಕಿದ ನಂತರ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವಂತೆ ಗುತ್ತಿಗೆದಾರರಾದ ಮೇ॥ ಎನ್.ಪಿ.ಸಿ.ಸಿ. ಲಿಮಿಟೆಡ್ ರವರಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ಸೂಚಿಸಲಾಗಿದೆ ಹಾಗೂ ನೋಟೀಸ್ ಗಳನ್ನು ಸಹ ನೀಡಲಾಗಿದೆ. ಆದಾಗ್ಯೂ ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಲು ವಿಫಲವಾದ ಹಿನ್ನೆಲೆಯಲ್ಲಿ ಅವರ ಗುತ್ತಿಗೆಯನ್ನು ಮೇ 2007ರಲ್ಲಿ ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ರದ್ದುಗೊಳಿಸಲಾಗಿದೆ.

(ಉ) ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ. ಜಾಕ್ ವೆಲ್ ದಲ್ಲಿನ ಪಂಪ್‌ಸೆಟ್ ಗಳನ್ನು ಚಾಲನೆ ಮಾಡಿ ಎಂ.ಎಸ್.ರೈಸಿಂಗ್ ಮೈನ್ ಮೂಲಕ

ನೀರನ್ನು ಶುದ್ದೀಕರಣ ಘಟಕಕ್ಕೆ ಪೂರೈಕೆ ಮಾಡಲಾಗಿದೆ. ಶುದ್ದೀಕರಣ ಘಟಕದಿಂದ ಪೈಪ್ ಲೈನ್ ಪರೀಕ್ಷೆ ನಡೆಸಲು ಪುನರ್ವಸತಿ ಕೇಂದ್ರಗಳಿಗೆ ಕಚ್ಚಾ ನೀರನ್ನು ಹರಿಸಲಾಗಿದೆ.

ಈ ಹಿಂದಿನ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಪಡಿಸಿರುವುದರಿಂದ, ಸದ್ಯದಲ್ಲಿಯೇ ಟೆಂಡರ್‌ಗಳನ್ನು ಕರೆದು ಬಾಕಿ ಕೆಲಸಗಳನ್ನು ಪೂರ್ಣಗೊಳಿಸಿ ಪುನರ್ವಸತಿ ಕೇಂದ್ರಗಳಿಗೆ ಆದಷ್ಟು ಬೇಗನೆ ಶುದ್ದೀಕರಿಸಿದ ನೀರನ್ನು ಪೂರೈಸಲಾಗುವುದು.

584. **ಶ್ರೀ ಸಿದ್ದು ಸಾವದಿ (ಜಮಖಂಡಿ):–** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿಪ್ಪರಗಿ ಯೋಜನೆಯಲ್ಲಿ ಮುಳುಗಡೆಯಾದ ಜಮಖಂಡಿ ತಾಲ್ಲೂಕಿನ ಒಟ್ಟು ಜಮೀನುಗಳೆಷ್ಟು? ಮುಳುಗಡೆಯಾದ ಎಲ್ಲಾ ಜಮೀನುಗಳಿಗೆ ಪರಿಹಾರ ಕೊಡಲಾಗಿದೆಯೇ;

(ಆ) ಕಳೆದ ಮೂರು ವರ್ಷಗಳಿಂದ ಈ ಯೋಜನೆಯಡಿ ಮುಳುಗಡೆ ಆಗಿ ಇಲ್ಲಿಯವರೆಗೆ ಪರಿಹಾರ ಕೊಡದೆ ಇರುವ ನೂರಾರು ಎಕರೆ ಜಮೀನು ಬಿಟ್ಟುಹೋಗಿರುವುದು ನಿಜವೆ;

(ಇ) ಹಾಗಿದ್ದಲ್ಲಿ, ಅದರ ಪರಿಹಾರವನ್ನು ಯಾವಾಗ ಕೊಡಲಾಗುವುದು ಮತ್ತು ನಾಲ್ಕು ವರ್ಷಗಳವರೆಗೆ ಪರಿಹಾರ ಕೊಡದೆ ಇರಲು ಕಾರಣಗಳೇನು?

(ಈ) ಕಳೆದ ವರ್ಷ ಹೆಚ್ಚುವರಿಯಾಗಿ ಉಳಿದ ಜಮೀನುಗಳನ್ನು ಸರ್ವೆ ಮಾಡಿ 4(1) ನೋಟೀಸು ಕೊಡುವ ಹಂತದಲ್ಲಿ ಏಕಾಏಕಿ ತಡೆಹಿಡಿಯಲು ಕಾರಣವೇನು?

(ಉ) ಇದರಿಂದ ಸಂತ್ರಸ್ಥ ರೈತರಿಗೆ ಅನ್ಯಾಯವಾಗುವುದಿಲ್ಲವೆ; ಹಾಗಿದ್ದಲ್ಲಿ ಇದಕ್ಕೆ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):–

(ಅ) ಹಿಪ್ಪರಗಿ ಯೋಜನೆಯಲ್ಲಿ ಮುಳುಗಡೆಯಾದ ಜಮಖಂಡಿ ತಾಲ್ಲೂಕಿನ ಒಟ್ಟು ಜಮೀನು 844–04 ಎಕರೆ ಆಗಿರುತ್ತದೆ. ಈ ಪೈಕಿ 749–00 ಎಕರೆಗೆ ಈಗಾಗಲೇ ಪರಿಹಾರ ಧನ ವಿತರಿಸಲಾಗಿದೆ. ಈಗ ಬಿಟ್ಟು ಹೋದ ಹೆಚ್ಚುವರಿ ಕ್ಷೇತ್ರ 235–34 ಎಕರೆಗೆ ಜಂಟಿ ಸರ್ವೆ ಕೈಗೊಂಡಿದ್ದು, ಭೂಸ್ವಾಧೀನ ಪ್ರಕ್ರಿಯೆ ಜರುಗಿಸಿ ಪರಿಹಾರ ಧನ ವಿತರಿಸಲಾಗುವುದು